ಈ) ಇಲ್ಲದಿದ್ದಲ್ಲಿ ಆ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಕುಡಿಯುವ ನೀರಿನ ಸರಬರಾಜಿಗೆ ಅಳವಡಿಸಿರುವ ಕೊಳವೆ ಮಾರ್ಗದಲ್ಲಿ ಸೋರಿಕೆ ಉಂಟಾಗಿದ್ದು ಸರ್ಕಾರದ ಗಮನಕ್ಕೆ ಬಂದಿದ್ದು ಸದರಿ ಕೊಳವೆ ಮಾರ್ಗದಲ್ಲಿ ನೀರು ಸರಬರಾಜು ಮಾಡುವುದನ್ನು ಸ್ಥಗಿತಗೊಳಿಸಿ, ಬಸವಕಲ್ಯಾಣ ಪಟ್ಟಣಕ್ಕೆ ಶುಲ್ಕಿ ನಾಲಾದಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಅಳವಡಿಸಲಾದ 300 ಮಿ.ಮೀ. ವ್ಯಾಸದ ಡಿ.ಐ. ಕೊಳವೆ ಮಾರ್ಗಕ್ಕೆ ಸಂಪರ್ಕ ಕಲ್ಪಿಸಿ. ಶುದ್ಧ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಆ) ಹೌದು

ಇ) ಪರಿಶೀಲನೆಯಲ್ಲಿದೆ.

ಈ) ಪರಿಶೀಲನೆಯಲ್ಲಿದೆ.

ಬಸವ ಕಲ್ಯಾಣ ಮತ್ತು ಕ್ಷೇತ್ರದಲ್ಲಿ ಕೈಗಾರಿಕೆ ಪ್ರಾರಂಭಿಸಲು ನೀಡುವ ರಿಯಾಯಿತಿಗಳು

157(371) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಕೂಬ.(ಬಸವಕಲ್ಯಾಣ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಇರುವ ಭಾರಿ. ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು ;

ಆ) ಈ ಕ್ಷೇತ್ರದಲ್ಲಿ ಕೈಗಾರಿಕೆಗಳನ್ವಯ ಪ್ರಾರಂಭಿಸಿರುವ ಉದ್ಯಮಿಗಳಿಗೆ ಎಷ್ಟು ಮೊತ್ತದ ಸಬ್ಸಿಡಿ ಹಣವನ್ನು ಪಾವತಿ ಮಾಡಬೇಕಿದೆ ? ಹಾಗೂ ಯಾವ ಅವಧಿಯಿಂದ ಈ ಬಾಕಿ ಉಳಿದುಕೊಂಡು ಬಂದಿದೆ ; (ಸಬ್ಸಿಡಿ ಹಣವನ್ನು ಪಾವತಿ ಮಾಡಬೇಕಾಗಿರುವ ಸಂಸ್ಥೆಗಳ ಹೆಸರು, ವಿವರ ಹಾಗೂ ಸಬ್ಸಿಡಿ ಹಣದ ಮೊತ್ತದ (ವಿವರಗಳನ್ನು ನೀಡುವುದು) :

ಇ) ಹಲವಾರು ವರ್ಷಗಳಿಂದ ಸಬ್ಸಿಡಿ ಹಣವು ಬಾಕಿ ಉಳಿದಿರುವುದರಿಂದ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

ಈ) ಬಸವಕಲ್ಯಾಣದಲ್ಲಿ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

ಉ) ಇಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸುವ ಉದ್ಯಮಿಗಳಿಗೆ ಯಾವ ಉತ್ತೇಜನ ಮತ್ತು ರಿಯಾಯಿತಿಗಳನ್ನು ನೀಡಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿ ದಿನಾಂಕ : 30-3-04 ರ ಅಂತ್ಯಕ್ಕೆ ಒಟ್ಟು 947 ಸಣ್ಣ ಕೈಗಾರಿಕೆಗಳು ಒಟ್ಟು ರೂ. 754.54 ಲಕ್ಷ ಬಂಡವಾಳ ಹೂಡಿ, 4862 ಉದ್ಯೋಗಾವಕಾಶಗಳನ್ನು ಕಲ್ಪಿಸಿ ಸ್ಥಾಪನೆಯಾಗಿವೆ. ಹಾಗೂ ಒಂದು ಮಧ್ಯಮ ಕೈಗಾರಿಕಾ ಘಟಕವು ಸ್ಥಾಪಿತವಾಗಿದೆ. ರೂ. 275 ಲಕ್ಷಗಳೊಂದಿಗೆ 120 ಜನರಿಗೆ ಉದ್ಯೋಗ ನೀಡಿದೆ.

ಆ) ಬಸವಕಲ್ಯಾಣ ತಾಲ್ಲೂಕಿನಲ್ಲಿ ದಿನಾಂಕ : 1-1-1999 ರಿಂದ 30-6-2004 ರವರೆಗೆ ಒಟ್ಟು 137 ಘಟಕಗಳಿಗೆ ರೂ. 59,46,065 ಸಹಾಯಧನ ಬಿಡುಗಡೆ ಮಾಡುವುದು ಬಾಕಿ ಇರುತ್ತದೆ.

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಇ) ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 81.00 ಕೋಟಿ ಹಣವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ವತಿಯಿಂದ ಬಾಂಡ್ ಮುಖಾಂತರ ಕ್ರೋಡೀಕರಿಸಿದ್ದು, ಬಿಡುಗಡೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಬಸವಕಲ್ಯಾಣದಲ್ಲಿ ರಾಷ್ಟ್ರೀಯ ಹೆದ್ದಾರಿ 9 ಇದಕ್ಕೆ ಹೊಂದಿಕೊಂಡಂತೆ ಒಂದು ಕೈಗಾರಿಕಾಪ್ರದೇಶ ಹಾಗೂ ಆಟೋ ನಗರ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಿ ಆಸಕ್ತ ಉದ್ದಿಮೆಶೀಲರಿಗೆ ವಿದ್ಯುತ್, ನೀರಿನ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ ಕೈಗಾರಿಕಾ ನಿವೇಶನಗಳನ್ನು ಒದಗಿಸಲು ವ್ಯವಸ್ಥೆ ಮಾಡಿದೆ. ಬಸವಕಲ್ಯಾಣ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಆಸಕ್ತಿ ಹೊಂದಿದ ಉದ್ದಿಮೆಶೀಲರಿಗೆ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹಾಗೂ ಸರ್ಕಾರದ ಉತ್ತೇಜನ ಮತ್ತು ರಿಯಾಯಿತಿಗಳ ಕುರಿತು ಪ್ರಚಾರ ಕಾರ್ಯಕ್ರಮ, ಉದ್ಯಮಶೀಲ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಪಾಲಿಟಿಕ್ನಿಕ್, ಐ.ಟಿ.ಐ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೂ ಸಹ ಸ್ವಯಂ ಉದ್ಯೋಗದ ಬಗ್ಗೆ ಮಾಹಿತಿಯನ್ನು ನೀಡಿ ಸ್ವಯಂ ಉದ್ಯೋಗದ ಬಗ್ಗೆ ಮಾಹಿತಿಯನ್ನು ನೀಡಿ ಸ್ವತಃ ಕೈಗಾರಿಕೆಗಳನ್ವಯ ಸ್ಥಾಪಿಸುವಲ್ಲಿ ಪ್ರೋತ್ಸಾಹ ನೀಡಲಾಗುತ್ತಿದೆ.

ಉ) 2001–06ನೇ ಸಾಲಿನ ರಾಜ್ಯ ಕೈಗಾರಿಕಾ ನೀತಿಯಂತೆ ಬಸವಕಲ್ಯಾಣ ತಾಲ್ಲೂಕನ್ನು ಹಿಂದುಳಿದ ; ಅಭಿವೃದ್ಧಿ ಹೊಂದುತ್ತಿರುವ ಪ್ರದೇಶ ಡಿ ವಲಯದಲ್ಲಿ ಸೇರಿಸಲಾಗಿದ್ದು ಈ ತಾಲ್ಲೂಕಿನಲ್ಲಿ ಪ್ರಾರಂಭಿಸುವ ಕೈಗಾರಿಕೆಗಳಿಗೆ ಶೇ. 25 ರಷ್ಟು (ಹಾಗೂ ಎಸ್‌ಸಿ/ಎಸ್‌ಟಿ ಮತ್ತು ಮಹಿಳೆಯರು ಸ್ಥಾಪಿಸುವ ಘಟಕವಾದಲ್ಲಿ ಶೇ. 5 ಹೆಚ್ಚುವರಿ ಸಹಾಯಧನ) ಅಲ್ಲದೆ 2 ಎಕರೆವರೆಗೂ ಕೈಗಾರಿಕೇತರ ಉದ್ದೇಶಕ್ಕೆ ಪರಿವರ್ತಿಸಲು ಭೂ ಪರಿವರ್ತನಾ ಶುಲ್ಕ ವಿನಾಯಿತಿ ಹಾಗೂ ಪ್ರದೇಶ ತೆರಿಗೆಗಳ ವಿನಾಯಿತಿಗಳು ಲಭ್ಯವಿರುತ್ತದೆ.

ಬಸವ ಕಲ್ಯಾಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆ.

158(370) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಕೂಬ.(ಬಸವಕಲ್ಯಾಣ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಸವಕಲ್ಯಾಣಕ್ಕೆ ಐ.ಡಿ.ಎಸ್.ಎಂ.ಟಿ ಯೋಜನೆಯಡಿಯಲ್ಲಿ ಕಳೆದ 4 ವರ್ಷಗಳಲ್ಲಿ ಬಿಡುಗಡೆಯಾಗಿರುವ ಹಣದ ಮೊತ್ತವೆಷ್ಟು ; ಹಾಗೂ ಈ ಹಣದಲ್ಲಿ ಈ ಅವಧಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳಾವುವು (ವಿವರಗಳನ್ನು ನೀಡುವುದು) ;

ಆ) ಈ ಕ್ಷೇತ್ರಕ್ಕೆ ಮೇಲ್ಕಂಡ ಯೋಜನೆಯಡಿ ಇನ್ನು ಎಷ್ಟು ಮೊತ್ತದ ಹಣ ಬರಬೇಕಾಗಿದೆ ;

ಇ) ಇದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ ;

ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ;

ಉ) ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ, ಯಾವಾಗ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ;

ಊ) ಬಸವಕಲ್ಯಾಣ ಮತಕ್ಷೇತ್ರಕ್ಕೆ ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ಬರಬೇಕಾದ ಹಣ ಬರದೇ ಇರುವುದರಿಂದ ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;